


# ಚಹಾ ಕಪ್‌ನಲ್ಲಿ ಚಂಡಮಾರುತ!

**ಬ್ರಿಟಿಷರ ಚಹಾ ತೆರಿಗೆ ನೀತಿ ವಿರುದ್ಧದ 'ಬೋಸ್ಟನ್ ಟೀ ಪಾರ್ಟಿ' ಘಟನೆ ನಡೆದು 250 ವರ್ಷಗಳು ಕಳೆದಿವೆ. ಅಮೆರಿಕದ ಕ್ರಾಂತಿಗೆ ನಾಂದಿ ಹಾಡಿದ ಈ ಪ್ರತಿಭಟನೆ ಇಂದಿಗೂ ಅಮೆರಿಕನ್ನರ ಮನದಲ್ಲಿ ಅಚ್ಚಳಿಯದೆ ಉಳಿದಿದೆ.**

■ **ಜಿ. ನಾಗೇಂದ್ರ ಕಾವೂರು**

ಅಮೆರಿಕದ ಬೋಸ್ಟನ್‌ನಲ್ಲಿ ಡಿಸೆಂಬರ್ 16, 1773ರಲ್ಲಿ ನಡೆದ 'ಬೋಸ್ಟನ್ ಟೀ ಪಾರ್ಟಿ' ಚಾರಿತ್ರಿಕ ವಿದ್ಯಮಾನಕ್ಕೀಗ 250 ವರ್ಷ. ರಾಜಕೀಯ ಮತ್ತು ವಾಣಿಜ್ಯ ಪ್ರತಿಭಟನೆಯಾಗಿ ಗುರುತಿಸಿಕೊಂಡಿರುವ ಆ ಘಟನೆ, ಎರಡು ಶತಮಾನಗಳು ಕಳೆದರೂ ಇಂದಿಗೂ ಅಮೆರಿಕದ ಜನಮಾನಸದಲ್ಲಿ ಹಚ್ಚಹಸುರು.

18ನೇ ಶತಮಾನದ ಮಧ್ಯ ಭಾಗದಲ್ಲಿ, ಚೀನಾದಿಂದ ಚಹಾವನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. 1773ರ ಹೊತ್ತಿಗೆ, ಅಮೆರಿಕನ್ ವಸಾಹತುಗಾರರು ಪ್ರತಿವರ್ಷ ಅಂದಾಜು 1.2 ಮಿಲಿಯನ್ ಪೌಂಡ್‌ಗಳ ಮೌಲ್ಯದ ಚಹಾ ಆಮದು ಮಾಡಿಕೊಳ್ಳುತ್ತಿದ್ದರು. ಈ ಬೇಡಿಕೆ ಬಗ್ಗೆ ಚೆನ್ನಾಗಿ ಅರಿತಿದ್ದ ಬ್ರಿಟಿಷ್ ಸರ್ಕಾರವು, ಅಮೆರಿಕನ್ ವಸಾಹತುಗಳ ಮೇಲೆ ಚಹಾ ತೆರಿಗೆ ವಿಧಿಸಿತು. ಇದರಿಂದಾಗಿ ಬ್ರಿಟಿಷ್ ಚಹಾದ ಬೆಲೆ ಹೆಚ್ಚಾಗತೊಡಗಿತು.

ಹೊಸ ತೆರಿಗೆಯನ್ನು ವಿರೋಧಿಸಲು 'ಸನ್ಸ್ ಆಫ್ ಲಿಬರ್ಟಿ' ಎಂದು ಕರೆಯಲಾಗುವ ಪ್ರತಿಭಟನಾ ಗುಂಪುಗಳು ರೂಪುಗೊಂಡವು. ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಹಾಗೂ ಸಂಘಟಿತರಾಗಿ ಬ್ರಿಟಿಷರ ವಿರುದ್ಧ ಪ್ರತಿಭಟಿಸಲು, ಬ್ರಿಟಿಷರನ್ನು ದುರ್ಬಲಗೊಳಿಸಲು ಎಲ್ಲಾ ವರ್ಗದ ಜನರು ಸಂಘಟಿತರಾಗಿದ್ದರು. ದೇಶಪ್ರೇಮಿಗಳಾದ ಜಾನ್ ಆಡಮ್ಸ್, ಜೇಮ್ಸ್ ಓಟಿಸ್, ಜೋಸಿಯಾ ಕ್ವಿನ್ಸಿ, ಪಾಲ್ ರೆವರೆ, ಜೋಸೆಫ್ ವಾರೆನ್ 'ಸನ್ಸ್ ಆಫ್ ಲಿಬರ್ಟಿ' ತಂಡದಲ್ಲಿ ಪ್ರಮುಖವಾಗಿದ್ದರು.

ಲಂಡನ್‌ನಿಂದ 'ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ' ಚಹಾವನ್ನು ಹೊತ್ತು ಹೊರಟಿದ್ದ ಮೂರು ಹಡಗುಗಳು ಬೋಸ್ಟನ್ ಹಾರ್ಬರ್‌ನಲ್ಲಿ ಲಂಗರು ಹಾಕಿದ್ದವು. ಈ ಮಾಹಿತಿ ದೊರೆತ ನಂತರ ಬೋಸ್ಟನ್ ನಗರದ ಅತಿದೊಡ್ಡ ಸಾರ್ವಜನಿಕ ಕಟ್ಟಡವಾದ 'ಓಲ್ಡ್ ಸೌತ್ ಮೀಟಿಂಗ್ ಹೌಸ್'ನಲ್ಲಿ 'ಸನ್ಸ್ ಆಫ್ ಲಿಬರ್ಟಿ' ತಂಡದ 5000ಕ್ಕಿಂತಲೂ ಅಧಿಕ ಮಂದಿ ಡಿಸೆಂಬರ್ 16, 1773ರಂದು ಬೆಳಿಗ್ಗೆ